1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

ಸಿ.ಸಿ. ನಂ. 15317-2016

ಸಿಡಬ್ಲೂ -29ಪಿಡಬ್ಲೂ-10

| | |
|---|---|
| ಸಾಕ್ಷಿದಾರನ ಹೆಸರು | : ಜಿ ಮೂರ್ತಿ |
| ತಂದೆಯ ಹೆಸರು | : ಗೋಪಾಲಪ್ಪ |
| ವಯಸ್ಸು | : 59 ವರ್ಷ |
| ಕೆಲಸ | : ಚಾಲಕರು |
| ವಾಸ | : ಅಯ್ಯವರ್ತಂಡ ಪುರ |

ಸಾಕ್ಷಿಯನ್ನು ದಿನಾಂಕಃ 07-08-2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ

ನನಗೆ ಚಾಸಾ 30 ರವರು ಗೊತ್ತಿಲ್ಲ. ಸಾಕ್ಷಿಯು ದಿ. 12-02-2016 ರ ಜಪ್ತಿ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 6 ಎ ಎಂದು ಗುರುತಿಸಲಾಯಿತು. ಈಗ್ಗೆ 3-4 ವರ್ಷಗಳ ಹಿಂದೆ ಸೋಲದೇವನಹಳ್ಳಿ ಪೋಲೀಸ್ ಠಾಣೆಗೆ ನನ್ನ ವೈಯಕ್ತಿಕ ಕೆಲಸದ ಮೇಲೆ ಹೋದಾಗ ಪೋಲೀಸರು ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಯಾವ ವಿಚಾರವಾಗಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಜೊತೆ ಬೇರೆ ಯಾರ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲು ಹಿ.ಸ.ಸಾ.ಅ. ರವರಿಂದಃ

ದಿ. 15-02-2016 ರಂದು ನನ್ನನ್ನು ಮತ್ತು ಚಾಸಾ 30 ರವರನ್ನು ಸೋಲದೇವನಹಳ್ಳಿ ಪೋಲೀಸ್ ಠಾಣಾ ಆವರಣದಲ್ಲಿ ನಿಲ್ಲಿಸಲಾದ 2 ಸುಟ್ಟು ಹೋದ ಕಾರುಗಳ ಬಿಡಿ ಭಾಗಗಳನ್ನು ಅಮಾನತ್ತು ಪಡಿಸಿಕೊಳ್ಳುವ ಸಮಯದಲ್ಲಿ ಠಾಣೆಗೆ ಬರಮಾಡಿಕೊಂಡು ಅದೇ ದಿನ ಮಧ್ಯಾನ್ನ 03.30 ರಿಂದ 04.30 ಗಂಟೆಯ ಸಮಯದಲ್ಲಿ ಸುಟ್ಟು ಕಾರಿನ ಬಿಡಿ ಭಾಗಗಳನ್ನು ನಿಪಿ. 6 ರಂತೆ ಅಮಾನತ್ತು ಪಡಿಸಿಕೊಂಡು ಅದಕ್ಕೆ ನನ್ನ ಮತ್ತು ಚಾಸಾ 30 ರವರುಗಳ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ. 6 ರಂತೆ ಅಮಾನತ್ತು ಪಡಿಸಿಕೊಳ್ಳಲಾದ  ಮಾಲುಗಳನ್ನು ನೋಡಿದರೆ ಗುರುತಿಸಲು ಸಾಧ್ಯವಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ ಇಲ್ಲಾ

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ಮ. ದಂ. ನ್ಯಾ